**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**

CC No.365/2011

CW -2 PW -4

| | | |
|---|---|---|
| ಹೆಸರು | ಃ | ಸಾವಿತ್ರಮ್ಮ |
| ಗಂಡನ ಹೆಸರು | ಃ | ಕೆಂಚೇಗೌಡ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ದ್ಯಾಪೇಗೌಡನದೊಡ್ಡಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 01.07.2024

(ಗೈರು ಹಾಜರಾದ ಆರೋಪಿ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ).

ಚಾಸಾ-1 ನನ್ನ ಮಗ. ಅವನು ತೀರಿಕೊಂಡಿರುತ್ತಾನೆ. ಚಾಸಾ-3 ರಿಂದ 5 ಗೊತ್ತು. ಅವರು ನಮ್ಮ ಊರಿನವರು.

ಸುಮಾರು 15 ವರ್ಷಗಳ ಹಿಂದೆ 7-8 ಗಂಟೆ ಸಮಯದಲ್ಲಿ ಕೊಲ್ಲಾಪುರದಮ್ಮ ದೇವಸ್ಥಾನದ ಬಳಿ 1 ನೇ ಆರೋಪಿ ಚಾಸಾ-1 ರವರ ಮೇಲೆ ಜಗಳ ತೆಗೆದು, ನಂತರ ನನ್ನ ಮಗ ಮನೆಗೆ ಬಂದ. ಅನಂತರ 1 ರಿಂದ 3 ನೇ ಆರೋಪಿತರು ನಮ್ಮ ಮನೆಯ ಬಳಿ ಬಂದು, 1 ನೇ ಆರೋಪಿ ಚಾಸಾ-1 ರವರಿಗೆ ಮಚ್ಚಿನಿಂದ ಹೊಡೆಯಲು ಬಂದಾಗ ಅವನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು, ಆತನ ಹಣೆಯ ಹತ್ತಿರ ಏಟಾಗಿರುತ್ತದೆ. 2 ಮತ್ತು 3 ನೇ ಆರೋಪಿತರು ನನ್ನನ್ನು ಸಹ ಕೈಗಳಿಂದ ಹೊಡೆದರು. ನಾನು ಅಲ್ಲಿಯೇ ಪ್ರಜ್ಞೆ ತಪ್ಪಿದೆ. ಚಾಸಾ-3

ಮತ್ತು 4 ರವರು ಬಂದು ಜಗಳ ಬಿಡಿಸಿ ನಮ್ಮನ್ನು ಪೋಲಿಸ್ ಠಾಣೆಗೆ ಕಳುಹಿಸಿದರು. ಅದಾದ ನಂತರ ಪೋಲಿಸರು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿ ರಕ್ತ ಕಲೆಯಾಗಿದ್ದ ಬಟ್ಟೆ ಮತ್ತು ಮಚ್ಚನ್ನು ಸ್ಥಳದಿಂದ ತೆಗೆದುಕೊಂಡರು. ಚಾಸಾ-1 ರವರಿಗೆ ರಕ್ತ ಗಾಯವಾಗಿದ್ದು ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದೆವು.

ಈಗ ತೋರಿಸುತ್ತಿರುವ ಒಂದು ಬನಿಯನ್, ಶರ್ಟ್ ಮತ್ತು ಮಚ್ಚನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಮು. ಮಾ. 1 ರಿಂದ 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

<u>ಪಾಟೀ ಸವಾಲು : ಎಪಿಪಿ ಯವರಿಂದ :</u>

ಚಾಸಾ-3 ಮತ್ತು 4 ರವರು ಬಂದು ಜಗಳ ಬಿಡಿಸಿದಕ್ಕೆ ನೀನು ಉಳಿದುಕೊಂಡೆ ಇಲ್ಲದಿದ್ದರೆ ನಿನ್ನ ಕತೆ ಮುಗಿಸುತ್ತಿದ್ದೆ ಎಂದು ಹೇಳಿ ಚಾಸಾ-1 ರವರಿಗೆ ಆರೋಪಿತರು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಜಮೀನಿನ ವಿಚಾರವಾಗಿ ನಮಗೂ ಮತ್ತು ಆರೋಪಿತರಿಗೂ ಗಲಾಟೆ ಆಗಿತ್ತು ಎಂದರೆ ಸರಿ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ:</u>

ಆರೋಪಿತರು ಚಾಸಾ-1 ರವರಿಗೆ ಮನೆಯ ಹೊರಗಡೆ ಹೊಡೆದಿದ್ದರು. 1 ನೇ ಆರೋಪಿ ಚಾಸಾ-1 ರವರಿಗೆ ಹೊಡೆಯುವಾಗ ನಾನು ಇದ್ದೆ. ದಿನಾಂಕ, ತಿಂಗಳು ಮತ್ತು ವರ್ಷ ನನಗೆ ನೆನಪಿಲ್ಲ. ಚಾಸಾ-1 ರವರಿಗೆ ಕುಡಿಯುವ ಅಭ್ಯಾಸವಿರಲಿಲ್ಲ. ಚಾಸಾ-1 ರವರು ಕುಡಿದು

ಬಿದ್ದು ಏಟು ಮಾಡಿಕೊಂಡು ತೀರಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಗಲಾಟೆ ಆದ ದಿನವೇ ಪೋಲಿಸ್ ನವರು ಸ್ಥಳಕ್ಕೆ ಬಂದರು. ಮು.ಮಾ. 1 ರಿಂದ 3 ಸ್ಥಳದಲ್ಲಿ ಇತ್ತು.

ಆರೋಪಿತರು ಜಮೀನಿನ ವಿಷಯವಾಗಿ ನಮ್ಮ ಮೇಲೆ ದಾವೆ ಹಾಕಿದ್ದರುಎಂದರೆ ಸರಿ. 2 ಮತ್ತು 3 ನೇ ಆರೋಪಿತರು ಸ್ಥಳಕ್ಕೆ ಬಂದಿರಲಿಲ್ಲ, ಯಾವುದೇ ಗಲಾಟೆ ಆಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿ ನನಗೆ ಹೊಡೆದಿರಲಿಲ್ಲ ನಾನು ಮನೆಯಲ್ಲಿ ಕಾಲು ಜಾರಿ ಬಿದ್ದಿದ್ದೆ ಎಂದರೆ ಸರಿಯಲ್ಲ. ಆರೋಪಿತರಿಂದ ಜಮೀನು ಪಡೆಯಲು ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಲ್ಲಿ ಯಾವುದೇ ಜಗಳ ನಡೆಯದೇ ಇದ್ದರೂ ಸಹ ಜಮೀನಿನ ವಿಚಾರವಾಗಿ ಖಾತೆಗೆ ಸಹಿ ಮಾಡಿಕೊಡದ ಕಾರಣ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**